ಅ) ಇಲ್ಲ - ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಾಗಿ ಮಾತ್ರ ಉತ್ತರ ನೀಡಿದೆ.

ಆ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಈ ಬಗ್ಗೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ನಗರದ ಮೂರು ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರ ಸ್ಥಾನಕ್ಕೆ ಶೀಘ್ರ ಸ್ಥಳಾಂತರಿಸಬೇಕೆಂದು ಕೇಳಿದ ಪ್ರಶ್ನೆಗೆ, ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಾಗಿ ಮಾತ್ರ ಉತ್ತರ ನೀಡಲಾಗಿದೆ ಎಂದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು, ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಉತ್ತರ ನೀಡಿದ್ದೀರಿ. ಸೇಡಂ ಕಂದಾಯ ಉಪವಿಭಾಗವಾಗಿ ಮೊದಲು ಸಣ್ಣ ನೀರಾವರಿ ಉಪವಿಭಾಗ ಎಂದು ಇದ್ದು 6-7 ವರ್ಷಗಳ ಮೊದಲು ಇದನ್ನು ಸ್ಥಳಾಂತರಿಸಲಾಯಿತು. ಈ ಭಾಗದಲ್ಲಿ ಹೆಚ್ಚು ಹೆಚ್ಚು ಕೆಲಸ ಇರುವ ಕಾರಣ ಈಗಾಗಲೇ ಕಾರ್ಯನಿರ್ವಾಹಕ ಅಭಿಯಂತರರು, ಗುಲ್ಬರ್ಗ - ಇವರು ಪತ್ರ ಬರೆದು ಮೂರು ಸಣ್ಣನೀರಾವರಿ ಉಪವಿಭಾಗಗಳು ಗುಲ್ಬರ್ಗಾದಲ್ಲಿ ಇದ್ದು ಅದರಲ್ಲಿ ಒಂದನ್ನು ಸೇಡಂಗೆ ಸ್ಥಳಾಂತರಿಸಲು 18.3.93ರಂದೇ ಶಿಫಾರಸ್ಸು ಮಾಡಿರುವುದು ನಿಜವೇ? ಒಂದು ವೇಳೆ ಶಿಫಾರಸ್ಸು ಮಾಡಿದ್ದರೆ ಇಲ್ಲಿಯವರೆಗೆ ವಿಳಂಬ ಮಾಡಿದ್ದು ಏಕೆ?

ಡಾ|| ಆರ್.ಬಿ. ಚೌಧರಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸೇಡಂ ಸಬ್ ಡಿವಿಜನ್ ಬೇಕಾಗಿದೆ ಎಂದಿದ್ದಾರೆ. ಆ ಸಬ್ಡಿವಿಜನ್ನಲ್ಲಿ ವಿನಾದರೂ ವರ್ಕ್ ಲೋಡ್ ಹೆಚ್ಚು ಇದ್ದರೆ ನಾನು ಕೊಟ್ಟೇ ಕೊಡುತ್ತೇನೆ ಎಂದು ಭರವಸೆ ಕೊಡುತ್ತೇನೆ. ಹೆಚ್ಚಿನ ಕೆಲಸ ಸೇಡಂ ಸಬ್ಡಿವಿಜನ್ನಲ್ಲಿ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಒಂದು ವೇಳೆ ನಿಜವಾದರೆ ಪರಿಶೀಲನೆ ಮಾಡಿ ತ್ವರಿತವಾಗಿ ಸಬ್ಡಿವಿಜನ್ ಕೊಡುತ್ತೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಹೆಚ್ಚುಹೆಚ್ಚು ಕೆಲಸ ಈಗಾಗಲೇ ಇದೆ ಎಂದು ಕಾರ್ಯನಿರ್ವಾಹಕ ಅಭಿಯಂತರರು ತನಿಕಾ ವರದಿಯನ್ನು ಕಳುಹಿಸಿದ್ದಾರೆ. ಆ ಭಾಗದ ಜನರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಮಾರ್ಚ್ ತಿಂಗಳ ಒಳಗೆ ಸ್ಥಳಾಂತರಿಸಿ ಅವರಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ.

ಡಾ|| ಆರ್.ಬಿ. ಚೌಧರಿ: ಕೊಡುತ್ತೇವೆಂದು ಹೇಳಿದ್ದರೂ ಸುತ್ತಿ ಬಳಸಿ ಅವರು ಮತ್ತೆ ಅದನ್ನೇ ಕೇಳುತ್ತಿದ್ದಾರೆ.

1993-94ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಕಾಮಗಾರಿ ಕೆಲಸಕ್ಕೆ ಹಣ ಬಿಡುಗಡೆ

152 - ಶ್ರೀ ಜಿ.ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖಾವತಿಯಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು?

ಆ) ಅವುಗಳಿಗೆ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹೊಳೆನರಸೀಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಕಾಮಗಾರಿ	ಯೋಜನೆ		ಯೋಜನೇತರ		ಒಟ್ಟು	
	ಸಂಖ್ಯೆ	ಮೊತ್ತ (ಲಕ್ಷ ರೂ.)	ಸಂಖ್ಯೆ	ಮೊತ್ತ (ಲಕ್ಷ ರೂ)	ಸಂಖ್ಯೆ	ಮೊತ್ತ (ಲಕ್ಷ ರೂ)
ರಸ್ತೆಗಳು	10	32.00	71	45.23	81	77.23
ಸೇತುವೆಗಳು	2	10.50	13	1.80	15	12.30
ಅಡ್ಡಮೋರಿಗಳು ಕಟ್ಟಡಗಳು	5	111.62	11	1.97	16	113.59
ಒಟ್ಟು	17	154.12	95	49.00	122	203.12

ಆ) ಈ ಕಾಮಗಾರಿಗಳಿಗೆ ಅನುದಾನ ಹಾಗೂ ಇಲ್ಲಿಯವರೆಗೆ ಆಗಿರುವ ವೆಚ್ಚ ಕೆಳಕಂಡಂತಿದೆ.

ಕಾಮಗಾರಿ	ಅನುದಾನ	ವೆಚ್ಚ
	(ಲಕ್ಷ ರೂ.ಗಳಲ್ಲಿ)	
ರಸ್ತೆಗಳು	46.20	20.66
ಸೇತುವೆಗಳು	3.13	4.66
ಕಟ್ಟಡಗಳು	16.63	13.98
	65.96	39.30

ಶ್ರೀ ಜಿ. ಪುಟ್ಟಸ್ವಾಮಿಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಅಂಕಿಅಂಶದ ಪ್ರಕಾರ ಹೊಳೇನರಸೀಪುರ ತಾಲ್ಲೂಕಿನಲ್ಲಿ 203 ಲಕ್ಷ ರೂಪಾಯಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಆದರೆ ಕೊಟ್ಟಿರತಕ್ಕ ಅನುದಾನ 65 ಲಕ್ಷ ರೂಪಾಯಿಗಳು. ಮತ್ತು ಇದುವರೆಗೆ ವೆಚ್ಚ ಮಾಡಿರತಕ್ಕ ಹಣ 39ಲಕ್ಷ ರೂಪಾಯಿಗಳು. ಬಹುಶಃ ಮಾನ್ಯ ಮಂತ್ರಿಗಳು ಅತ್ಯಂತ ಹಿರಿಯ ಮಂತ್ರಿಗಳು ಇದ್ದಾರೆ. ಈ ಅಂಕಿಅಂಶ ಅವರಿಗೆ ಸಮಾಧಾನ ತಂದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದುವರೆಗೆ 39 ಲಕ್ಷ ಖರ್ಚು ಮಾಡಿದ್ದನ್ನು ಸರಾಸರಿ ಲೆಕ್ಕ ಹಾಕಿದರೆ ತಿಂಗಳಿಗೆ 4 ಲಕ್ಷ ಬರುತ್ತದೆ. ಆದರೆ ಅದರಲ್ಲಿ ಸಿಬ್ಬಂದಿ ವೆಚ್ಚ 1 ಲಕ್ಷ ಆಗುತ್ತದೆ. 1 ಲಕ್ಷ ಖರ್ಚು ಮಾಡಿದರೆ 4 ಲಕ್ಷ ಕಾಮಗಾರಿ ಕೆಲಸ ನಡೆದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕೊಡತಕ್ಕಹಣ ಮೂರನೇ ಒಂದು ಭಾಗ ಇದ್ದು ಅದರಲ್ಲಿ ಖರ್ಚು ಮಾಡಿರತಕ್ಕದ್ದು ಅರ್ಧ ಭಾಗ. ಈ ರೀತಿ ಕೆಲಸದ ವೇಗ ಏನೂ ಆಗಿಲ್ಲ ಎಂದು ಅವರ ಗಮನಕ್ಕೆ ತರುತ್ತಾ, ಕನಿಷ್ಠಪಕ್ಷ ಅನುದಾನ ಕೊಟ್ಟಿರುವುದನ್ನಾದರೂ ಖರ್ಚು ಮಾಡುವುದಕ್ಕೆ ಮಂತ್ರಿಗಳು ಈ ಸಲ ಕ್ರಮ ತೆಗೆದುಕೊಳ್ಳುತ್ತಾರಾ?

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಗೊತ್ತಿದೆ. ಮೂರನೇ ಒಂದು ಭಾಗ ಅಷ್ಟೇ ನಾವು ಇಟ್ಟಿರುತ್ತೇವೆ ಎಂದು. ಹೀಗಾಗಿ 65 ಲಕ್ಷ ರೂಪಾಯಿ ಅನುದಾನ ಇದೆ. ಮತ್ತೆ 39 ಲಕ್ಷ ರೂಪಾಯಿಗಳ ಎಲ್‌ಓಸಿ ಬಿಡುಗಡೆ ಆಗಿದೆ. ಕೊಡತಕ್ಕದ್ದು 11ಲಕ್ಷ ನಾವು ಕೊಡಬೇಕಾಗಿದೆ. 50 ಲಕ್ಷ ರೂಪಾಯಿಗೂ ಹೆಚ್ಚು ಕೆಲಸ ಆಗಿದೆ. ಆದ್ದರಿಂದ ಬಾಕಿ ಇರತಕ್ಕದ್ದು ಸ್ವಲ್ಪ ಹಣ.